

## ಆರ್‌ಜಿವಿಯ 'ಸನ್ನಿ'ಮಾತು

'ಜಗತ್ತಿನ ಎಲ್ಲ ಮಹಿಳೆಯರೂ ಪುರುಷರಿಗೆ ಸನ್ನಿ ಲಿಯೋನ್ ನೀಡುವಂತಹ ಖುಷಿ ನೀಡಲಿ' ಹೀಗಂತ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಿರ್ದೇಶಕ ರಾಮ್ ಗೋಪಾಲ್ ವರ್ಮಾ ಮಾಡಿದ ಟ್ವೀಟ್ ದೊಡ್ಡ ಮಟ್ಟದಲ್ಲಿ ಕಿಡಿ ಹಚ್ಚಿತ್ತು. ಈ ಬಗೆಯ ವಿವಾದ ಹುಟ್ಟಿಸುವುದು ವರ್ಮಾಗೆ ಹೊಸತಲ್ಲ. ಮತ್ತು ಅವುಗಳಿಗೆ ಅವರು ತಲೆಕೆಡಿಸಿಕೊಳ್ಳುವುದೂ ಇಲ್ಲ. ನಿರ್ದೇಶಿಸಿದ ಸಿನಿಮಾಗಳೂ ವಿವಾದದಿಂದ ಹೊರತಲ್ಲ. ಮಹಿಳಾ ದಿನಾಚರಣೆಗೆ ವರ್ಮಾ ಮಾಡಿದ ಟ್ವೀಟ್ ಸಹಜವಾಗಿಯೇ ಸದ್ದು ಮಾಡಿತು. ಅದಕ್ಕೆ ವರ್ಮಾ ನೀಡಿದ ಪ್ರತಿಕ್ರಿಯೆ 'ನನ್ನ ಟ್ವೀಟ್‌ಗಳ ಕುರಿತು ಯಾರು ಕೋಪ ಮಾಡಿಕೊಳ್ಳುತ್ತಾರೋ, ಅವರೇ ಹೆಚ್ಚು ಅದನ್ನು ನೋಡಿ ಖುಷಿ ಪಟ್ಟಿರುತ್ತಾರೆ.

'ಒಮ್ಮೆ ಟ್ವೀಟ್ ಒಂದನ್ನು ಮಾಡಿದ ಬಳಿಕ ನನಗೆ ಬೆದರಿಕೆ ಕರೆಗಳು ಬಂದವು. ಎಚ್ಚರಿಕೆಯನ್ನೂ ನೀಡಲಾಯಿತು. ಪೊಲೀಸರು ಕರೆಸಿದರು. ನನ್ನನ್ನು ಬಂಧಿಸುತ್ತಾರೆ ಎಂದುಕೊಂಡು ಹೋದೆ. ನನ್ನೆದುರು ಕುಳಿತ ಪೊಲಿಸ್ ಅಧಿಕಾರಿ ಟ್ವೀಟ್ ನೋಡಿ ನಗು ತಾಳಲಾರದೆ ಕುರ್ಚಿಯಿಂದ ಕೆಳಕ್ಕೆ ಉರುಳಿದ' ಎಂದು ತನ್ನದು ವಿಡಂಬನೆ, ತಮಾಷೆಯ ಟ್ವೀಟ್ ಅಷ್ಟೇ ಎಂಬುದನ್ನು ವರ್ಮಾ ಸಮರ್ಥಿಸಿಕೊಳ್ಳುತ್ತಾರೆ. ಮೊನ್ನೆಯ ಟ್ವೀಟ್‌ಗೆ ತೀವ್ರ ಆಕ್ಷೇಪ ವ್ಯಕ್ತವಾದಾಗ ವರ್ಮಾ ಕ್ಷಮೆ ಕೇಳಿದ ರೀತಿ ಕೂಡ ವ್ಯಂಗ್ಯವಾಗಿಯೇ ಇತ್ತು. 'ನನ್ನ ಟ್ವೀಟ್‌ನಿಂದ ನಿಜಕ್ಕೂ ಗಾಸಿಯಾದವರಿಗೆ ಕ್ಷಮೆ ಕೋರುತ್ತೇನೆ ಆದರೆ, ಪ್ರಚಾರಕ್ಕಾಗಿ ಕಿರುಚಾಡಿದವರಿಗಲ್ಲ' ಎಂದಿದ್ದಾರೆ ವರ್ಮಾ.

'ಸರ್ಕಾರ್' ಸಿನಿಮಾದ ಯಶಸ್ಸಿನ ಬಳಿಕ ವರ್ಮಾ, ಅದರ ಮೂರನೇ ಆವೃತ್ತಿಯ ಸಿದ್ಧತೆಯಲ್ಲಿದ್ದಾರೆ. ಹಿಂದಿನ ಎರಡು ಆವೃತ್ತಿಗಳಿಗಿಂತ ಇದರ ಕಥೆ ಹೆಚ್ಚು ತೀವ್ರತೆ ಹೊಂದಿದೆ ಎನ್ನುವುದು ಅವರ ವಿವರಣೆ. ಏಕೆಂದರೆ, ಈ ಚಿತ್ರದಲ್ಲಿ ನಕಾರಾತ್ಮಕ ಛಾಯೆ ಪಾತ್ರಗಳು ಹೆಚ್ಚು ಶಕ್ತಿಯುತವಾಗಿವೆಯಂತೆ. ಅಮಿತಾಭ್ ಬಚ್ಚನ್ ಪೋಷಿಸುತ್ತಿರುವ ಪಾತ್ರದಲ್ಲಿ ವ್ಯಗ್ರತೆ ಜಾಸ್ತಿ. ನಾಟಕೀಯ ಸನ್ನಿವೇಶಗಳೂ ಅಧಿಕ ಮಟ್ಟದಲ್ಲಿವೆ. 'ಸರ್ಕಾರ್', 'ಸರ್ಕಾರ್ ರಾಜ್' ಮತ್ತು 'ಸರ್ಕಾರ್ 3' ಚಿತ್ರಗಳ ನಡುವೆ ಯಾವುದೇ ಸಂಬಂಧವಿಲ್ಲ. ಈ ಚಿತ್ರ ಸಂಕೀರ್ಣ ಸಂಬಂಧಗಳ ಕುರಿತು ಗಮನ ಕೊಡುತ್ತದೆ ಎಂದಿದ್ದಾರೆ.



## ವೀಣಾ ವಿಚ್ಛೇದನ

ಬಾಲಿವುಡ್‌ನಲ್ಲಿ ಅಡ್ಡಾಡಿ, ಕನ್ನಡದ ನೆಲಕ್ಕೂ ಬಂದು ಹೋಗಿದ್ದ ಪಾಕಿಸ್ತಾನದ ನಟಿ ವೀಣಾ ಮಲಿಕ್, ದಾಂಪತ್ಯಕ್ಕೆ ಅಂತ್ಯ ಹಾಡಿರುವ ಸುದ್ದಿ ಬಂದಿದೆ. ವಿವಾದಗಳು ಹೆಚ್ಚಾಗಿ ಬೇಡಿಕೆ ಕಡಿಮೆಯಾದ ಬಳಿಕ ವೀಣಾ ಪಾಕಿಸ್ತಾನಕ್ಕೆ ಮರಳಿದ್ದಳು. 2013ರ ಡಿಸೆಂಬರ್‌ನಲ್ಲಿ ಉದ್ಯಮಿ ಅಸಾದ್ ಖಟ್ಟಕ್ ಜತೆ ಸಂಸಾರದ ನೊಗಕ್ಕೆ ಹೆಗಲು ಕೊಟ್ಟಿದ್ದಳು. ಒಬ್ಬ ಮಗ ಮತ್ತು ಮಗಳೂ ಹುಟ್ಟಿದರು. ಆದರೆ ಮೂರೇ ವರ್ಷದಲ್ಲಿ ಇಬ್ಬರ ನಡುವೆ ಬಿರುಕು ಕಾಣಿಸಿಕೊಂಡಿದೆ. ಮೂಲಗಳ ಪ್ರಕಾರ ಈ ಒಡಕಿಗೆ ಕಾರಣವಾಗಿರುವುದು ವೀಣಾಳ ನಟನೆಯ ಬಯಕೆ.

ಮಕ್ಕಳಾದ ಬಳಿಕ ಮತ್ತೆ ಬಣ್ಣದ ಜಗತ್ತಿಗೆ ಮರಳಬೇಕೆಂಬ ಆಸೆ ವೀಣಾಳಲ್ಲಿ ಚಿಗುರಿತ್ತು. ಆದರೆ ಇದಕ್ಕೆ ಖಟ್ಟಕ್ ಮತ್ತು ಆತನ ಕುಟುಂಬದವರು ಅನುಮತಿ ನೀಡಲಿಲ್ಲ. ಈ ವಿಚಾರವಾಗಿಯೇ ಅವರ ನಡುವೆ ಮನಸ್ತಾಪ ಹುಟ್ಟಿಕೊಂಡಿತು. ಆದರೆ, ಸಿನಿಮಾಕ್ಕೆ ವಾಪಸಾಗಲೇಬೇಕೆಂಬ ಹಟದಿಂದ ವೀಣಾ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಳು. ವೀಣಾಳ ಅರ್ಜಿಗೆ ಪ್ರತಿಯಾಗಿ ಪ್ರಕರಣ ಎದುರಿಸಲು ಖಟ್ಟಕ್ ವಿಫಲನಾದ ಕಾರಣಕ್ಕೆ ಕೌಟುಂಬಿಕ ನ್ಯಾಯಾಲಯ ವೀಣಾ ಪರವಾಗಿ ತೀರ್ಪು ನೀಡಿದೆ. ವೀಣಾ ಮತ್ತೆ ಸಿನಿಮಾಗಳಲ್ಲಿ ನಟಿಸುತ್ತಾಳಾ ಅಥವಾ ಕಿರುತೆರೆಗೆ ಮರಳುತ್ತಾಳಾ?

■ ಅಮಿ